(SRI VEERENDRA PATIL)

with them. So far as the invitation is concerned, I had an invitation from the Mayor Mr. Prefecto Chizoka for the presentation of baby elephant to the children of Sumidu, and I took that opportunity also.

ಶ್ರೀ ಪಾಟಾಳ್ ನಾಗರಾಜ್.—ನದರಿ ಪ್ರವಾಸದಲ್ಲಿ ಮುಖ್ಯಮಂತ್ರಿಯವರ ಜೊತ ಯಾರ್ಯಾರು ಪ್ರವಾಸ ಮಾಡಿದ್ದಾರೆ ಎಂಬ ಪ್ರಶ್ನೆಗೆ, ಶ್ರೀಮಾನ್ ಟಿ. ಶಾಮಣ್ಣನವರು ಎಂದು ಇದೆ. ಆದರೆ, ಜೂನ್ 21ನೇ ತಾರೀಕಿನ ಹಿಂದೂ ಪೇಪರಿನಲ್ಲಿ ಒಂದು ಫೊಟೊ ಬಂದಿದೆ. ಆದರಲ್ಲಿ ಶ್ರೀಮಾನ್ ವೀರೇಂದ್ರ ಪಾಟೀಲರು ಮತ್ತು ಶ್ರೀಮತಿ ವೀರೇಂದ್ರ ಪಾಟೀಲರು ಜಪಾನಿನಲ್ಲಿ ಎಕ್ಸ್‌ಪೋ 70 ನೋಡಿ ಕಾರಿನಲ್ಲಿ ಪ್ರಯಾಣ ಮಾಡುತ್ತಿರುವುದು ಎಂದು ಬಂದಿದೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಪಿಕ್ಚರಿನಲ್ಲಿ ಏನು ಬಂದಿದೆ ಮತ್ತು ಅದರಲ್ಲಿ ಏನು ಬರದಿದ್ದಾರೆ ಎಂಬುದನ್ನು ಹೇಳಿದ್ದಾರೆ. ಆದರೆ ನಾನು ನನ್ನ ಶ್ರೀಮತಿಯನ್ನು ಕರಕೊಂಡು ಹೋಗಿಲ್ಲ. ಆದ್ದರಿಂದ ಪೇಪರಿನಲ್ಲಿ ಏನು ಬರದಿ ಬಂದಿದೆ, ಅದು ಸರಿಯಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಮುಖ್ಯಮಂತ್ರಿಯವರು ಜಪಾನ್ ಸರ್ಕಾರದ ಆಹ್ವಾನದ ಮೇರೆ ಈ ಪ್ರವಾಸವನ್ನು ಮಾಡಿದ್ದಾರೆಂದು ಹೇಳಿದರು. ಆದರೆ, ಪೇಪರಿನಲ್ಲಿ ಜಪಾನ್ ಸರ್ಕಾರದವರು ಮುಖ್ಯಮಂತ್ರಿಯವರನ್ನು ಆಹ್ವಾನಿಸಿಲ್ಲ ಎಂದು ಬರದಿಯಾಗಿದೆ. ಇದರಲ್ಲಿ ಯಾವುದು ಸರಿ, ಯಾವುದು ತಪ್ಪು ?

ಶ್ರೀ ವೀರೇಂದ್ರ ಪಾಟೀಲ್.—ಪತ್ರಿಕೆಗಳಲ್ಲಿ ಏನು ಬರದಿಯಾಗಿದೆ. ಅದಕ್ಕೆ ನಾನು ಜವಾಬ್ದಾರನಲ್ಲ. ಯಾರಿಂದ ನನಗೆ ಇನ್‌ವಿಟೇಶನ್ ಬಂದಿದೆ ಅದು ಸರಿಯಾದ ವಿಚಾರ.

Sri K. H. RANGANATH.—Were you invited by the Government of Japan ?

Sri VEERENDRA PATIL.—I have already said from whom I had an invitation.

Retention and Transfers of Assistant Engineers, Supervisors and other Staff of P. W. D.

36. Sri MAHADEV G. BANAKAR (Byadagi).—

Will the Minister for Public Works be pleased to state :—

(*a*) the period up to which the Supervisors, Junior Engineers and Assistant Engineers serving in the Public Works Department can continue in the sams sub-division or circle ;

(*b*) whether the Government is following any rule in regard to their transfers ;

(*c*) since how long the P. W. D. Supervisors, Junior Engineers and Assistant Engineers are serving in the same sub-division and circle in Dharwar circle ;

(*d*) whether the Government have taken any action against those who are serving in the same sub-division or circle in Dharwar circle for a longer period violating the rule in respect of trnsfers followed by the Government ;

(*e*) if not, the reason for the same ?

Sri K. LAKKAPPA (Minister for Public Works).—

(*a*) The normal incumbancy of these officials in one place or sub-divison will be 3 years and 6 years in the same Circle. A supervisor is ordinarily retained in the same Circle. For reasons of administrative exegencies, he can be retained for a longer period with the approval of the higher authorities, then the authority competent to make their postings and transfers. In the case of Assistant Engineers for retention for longer period than the stipulated period, Government approval would be necessary.

(*b*) Yes. The standing orders prescribe the above conditions.

(*c*) A statement is appended.

(*d*) and (*e*) The matter will be looked into.

Statement showing the number of Assistant Engineers, Junior Engineers and Supervisors who have put in more than six years in Dharwar Circle and three years at a place as on 1st April 1970.

Assistant Engineers	...	2
Junior Engineers	...	14
Superivsors	...	30

ಶ್ರೀ ಮಹದೇವ ಬಣಕಾರ್—ತಮ್ಮ ಉತ್ತರದಲ್ಲಿ ಒಂದೇ ಸರ್ಕಲನಲ್ಲಿ ಅಥವಾ ಒಂದೇ ಸಬ್ ಡಿವಿಜನಿನಲ್ಲಿ ಸಬ್ ಓವರ್‌ಸೀಯರ್ಸ್ ಜೂನಿಯರ್, ಇಂಜಿನಿಯರ್ ಮತ್ತು ಅಸಿಸ್ಟಾಂಟ್ ಇಂಜಿನಿಯರ್ಸ್ ಒಂದು ಸಬ್ ಡಿವಿಜನಿನಲ್ಲಿ ಮೂರು ವರ್ಷಗಳ ವರೆಗೂ ಮತ್ತು ಒಂದೇ ಸರ್ಕಲನಲ್ಲಿ ಆರು ವರ್ಷಗಳವರೆಗೂ ಕೆಲಸ ಮಾಡಬಹುದು ಎಂದು ಹೇಳಿದ್ದೀರಿ. ಆದರೆ ಧಾರವಾಡ ಸರ್ಕಲನಲ್ಲಿ 21 ಅಸಿಸ್ಟಾಂಟ್ ಇಂಜಿನಿಯರುಗಳು, 14 ಜೂನಿಯರ್ ಇಂಜಿನಿಯರುಗಳು, ಮತ್ತು 30 ಸುಪರ್‌ವೈಸರ್ಸ್‌ಗಳನ್ನು 6 ವರ್ಷಕ್ಕಿಂತ ಹೆಚ್ಚು ಸಮಯ ಇಟ್ಟಿರುವುದಕ್ಕೆ ಸರ್ಕಾರದವರು ಏನಾದರೂ ಅನುಮತಿ ಕೊಟ್ಟಿದ್ದೀರಾ? ಕೊಟ್ಟಿದ್ದರೆ ಯಾವ ಕಾರಣಕ್ಕಾಗಿ ಕೊಟ್ಟಿದ್ದೀರಿ? ಕೊಡದ್ದಿದ್ದರೆ ಯಾವ ಕಾರಣಕ್ಕಾಗಿ ಕೊಟ್ಟಿಲ್ಲ, ಮತ್ತು ಹಾಗೆ ಇಟ್ಟಿದ್ದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕೆ. ಲಕ್ಕಪ್ಪ.—ಒಂದು ಸರ್ಕಲನಲ್ಲಿ 6 ವರ್ಷಗಳಿಗಿಂತ ಹೆಚ್ಚು ಕಾಲ ಒಬ್ಬ ಅಧಿಕಾರಿಯನ್ನು ಅಲ್ಲಿಡಬೇಕಾದರೆ, ಅದಕ್ಕೆ ಸರ್ಕಾರದ ಅನುಮತಿ ಪಡೆಯಬೇಕಾಗುತ್ತದೆ. ಆದರೆ ಇಲ್ಲಿಯ ಅಸಿಸ್ಟಾಂಟ್ ಇಂಜಿನಿಯರ್ 6 ವರ್ಷಕಿಂತ ಜಾಸ್ತಿ ಸಮಯ ಅಲ್ಲಿಯೇ ಇದ್ದಾರೆ ಎಂಬುದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಅದಕ್ಕೆ ಸರ್ಕಾರದ ಅನುಮತಿಪಡೆದಿಲ್ಲವೆಂದು ಗೊತ್ತಿದೆ. ಅದಕ್ಕೆ ಏಕೆ ಅನುಮತಿ ಪಡೆದಿಲ್ಲವೆಂಬುದರ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ತತ್ಪಶಃ ಒಬ್ಬನನ್ನು ಮೂರು ವರ್ಷಕ್ಕಿಂತ ಹೆಚ್ಚು ಕಾಲ ಒಂದೇ ಕಡೆ ಇಟ್ಟರೆ, ಅಲ್ಲ ಫೇವರಿಟಿಸಂ, ಲಂಚಗುಳಿತನ ಮುಂತಾದುವುಗಳು ಹೆಚ್ಚು ನಡೆಯುವುದಕ್ಕೆ ಅವಕಾಶವಾಗುತ್ತದೆ ಎಂದಿರುವುದರಿಂದ, ಬೇರೆ ಕಡೆಗೆ ಅವನನ್ನು ವರ್ಗಾವಣೆ ಮಾಡುವುದು. ಆದರೆ, ಇಲ್ಲಿ ಅಧಿಕಾರಿಯನ್ನು ಮೂರು ವರ್ಷಕಿಂತ ಹೆಚ್ಚು ಕಾಲ ಇಟ್ಟಿರುವುದರಿಂದ, ಅಲ್ಲಿ ಆ ಅಧಿಕಾರಿಗೆ ರಾಜಕೀಯ ವ್ಯಕ್ತಿಗಳ ಬೆಂಬಲ ಇದೆ ಎಂದಾಗುತ್ತದೆ. ಆದ್ದರಿಂದ ಅಂಥ ಅಧಿಕಾರಿಗಳನ್ನು ಮೂರು ವರ್ಷವಾದ ಕೂಡಲೇ ವರ್ಗ ಮಾಡುತ್ತೇನೆಂದು ಭರವಸೆಯನ್ನು ಕೊಡುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ಸರ್ವಸಾಮಾನ್ಯವಾಗಿ ಮೂರು ವರ್ಷಗಳ ಮೇಲೆ ಯಾರನ್ನೂ ವರ್ಗಮಾಡದೆ ಇಡುವುದಿಲ್ಲ. ಇದನ್ನು ವಿಚಾರ ಮಾಡಿ, ಆ ನಂತರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಪಿ. ಗಂಗಾಧರ್.—ಕಾನೂನು ಪ್ರಕಾರ ಮೂರು ವರ್ಷವಾದ ಕೂಡಲೇ ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ. ಇಲ್ಲಿ ಕಾನೂನು ಮೀರಿ 6 ವರ್ಷವಾಗಿದೆ. ಇದು ನಿಮ್ಮ ಇಲಾಖೆಯ ಇನ್ ಎಫಿಶೀಯನ್ಸಿಯನ್ನು ಪ್ರೂವ್ ಮಾಡುವುದಿಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಆ ವಿಚಾರ ಈಗ ತಾನೇ ಗಮನಕ್ಕೆ ಬಂದಿದೆ. ಮುಂದೆ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಉತ್ತರದಲ್ಲಿ ಈಗತಾನೇ ನನ್ನ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಆದರೆ ಬೆಂಗಳೂರು ಕಾರ್ಪರೇಶನ್ ಇಂಜಿನಿಯರ್ಸ್ ಮತ್ತು ಇತರರ ಟ್ರಾನ್ಸ್‌ಫರ್ ಬಗ್ಗೆ ನಿಮ್ಮ ಗಮನಕ್ಕೆ ಅನೇಕ ಬಾರಿ ತಂದರೂ ಕೂಡ, ಅವರನ್ನು 10–12 ವರ್ಷ ಅಲ್ಲಯೇ ಇಡಲು ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—ಗಮನಕ್ಕೆ ಬಂದರೆ ಅದನ್ನು ವಿಚಾರ ಮಾಡಿ ಕ್ರಮ ತೆಗೆದು ಕೊಳ್ಳುತ್ತೇವೆ. ಈಗಾಗಲೇ ಬೆಂಗಳೂರು ಕಾರ್ಪರೇಶನಿನ ಹಲವಾರು ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಲು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೋದ ಸಾರಿ ಬಜೆಟ್ ಭಾಷಣದಲ್ಲಿ ಈ ಸುಪರ್‌ವೈಸರಿ ಅಧಿಕಾರಿಗಳ ಬಗ್ಗೆ ಬಹಳ ಹೇಳಿದ್ದೇನೆ. ಅದಕ್ಕೆ ಮಂತ್ರಿಯವರು ಪಟ್ಟ ಮಾಡಿ ಕೂಡಿ ವಿಚಾರಿಸುತ್ತೇನೆ ಎಂದು ಹೇಳಿದ್ದಾರೆ. ಆದರೆ ಗುಂಡ್ಲುಪೇಟೆಯಲ್ಲಿರುವ ಈ ಅಧಿಕಾರಿಗಳನ್ನು ಇಷ್ಟರ ವರೆಗೂ ಟ್ರಾನ್ಸ್‌ಫರ್ ಮಾಡದಿರಲು ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—ಸೂಪರ್‌ವೈಸರುಗಳನ್ನು ಸರ್ವೇಸಾಮಾನ್ಯವಾಗಿ ಒಂದು ಡಿವಿಜನಿಂದಾಗಲಿ, ಸರ್ಕಲಿನಿಂದಾಗಲಿ, ಪದೇ ಪದೇ ಬದಲಾಯಿಸುವುದಿಲ್ಲ. ಕಾರಣವೇನೆಂದರೆ, ಅವರು ಸಣ್ಣ ಅಧಿಕಾರಿಗಳು ಮತ್ತು ಅವರ ಸಂಬಳ ಕೂಡ ಕಡಿಮೆ. ಆದ್ದರಿಂದ ಅವರನ್ನು ಹಾಗೆ ಟ್ರಾನ್ಸ್‌ಫರ್ ಮಾಡುವುದು ಸೂಕ್ತವಲ್ಲವೆಂದು ಕಾಣುತ್ತದೆ, ಆದರೆ ಅನಿವಾರ್ಯವಾದ ಸಂದರ್ಭಗಳಲ್ಲಿ ಮಾತ್ರ ವರ್ಗ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈಗ ಮೂರು ವರ್ಷಗಳ ನಂತರ ಒಬ್ಬನನ್ನು ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ. ಇಲ್ಲ ಈಗ 6 ವರ್ಷದವರೆಗೂ ಇದ್ದಾರೆಂದು ಹೇಳಿದ್ದೀರಿ. ಹಾಗೆ ಇದ್ದುದಕ್ಕೆ ಸರ್ಕಾರದ ಅನುಮತಿಯನ್ನು ಪಡಕೊಳ್ಳಬೇಕಾಗಿತ್ತು, ಪಡಕೊಂಡಿಲ್ಲ. ಇದರಲ್ಲಿ ಒಂದಾ ನೀವು ಮೂರು ವರ್ಷವಾದ ನಂತರ ಟ್ರಾನ್ಸ್‌ಫರ್ ಮಾಡಬೇಕು, ಇಲ್ಲವೇ, ಆ ಅಧಿಕಾರಿಯೇ ಮೂರು ವರ್ಷಕ್ಕಿಂತ ಹೆಚ್ಚಾಗಿ ಇದ್ದರೆ, ಅವನ ತಪ್ಪಾಗುತ್ತದೆ. ಆದ್ದರಿಂದ ಈ ರೀತಿ ಅವನು ತಪ್ಪು ಮಾಡಿದರೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಅಥವಾ ನೀವೇ ಅವನನ್ನು ಟ್ರಾನ್ಸ್‌ಫರ್ ಮಾಡದಿದ್ದರೆ, ನಿಮ್ಮ ಮೇಲೆ ಯಾವ ರೀತಿ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿ.

ಶ್ರೀ ಕೆ. ಲಕ್ಕಪ್ಪ.—ಯಾರು ಈ ಟ್ರಾನ್ಸ್‌ಫರನ್ನು ಮಾಡಬೇಕಾಗಿತ್ತು, ಮತ್ತು ಯಾರು ರೀಜ್ಯೆನ್ ಮಾಡಿದ್ದಾರೆ, ಎಂಬುದನ್ನು ಎಲ್ಲಾ ವಿಚಾರಮಾಡಿದ ಮೇಲೆ ಏನಾದರೂ ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರ ಮೊದಲು ಏನೂ ಮಾಡಲಾಗುವುದಿಲ್ಲ.

Mr. SPEAKER.—Question Nos. 40 and 169 may be taken up together.

Non-availability of Text Books

40. **Sri B. B. SAYANAK** (Belgaum).—

Will the Minister for Education be pleased to state :—

(*a*) whether it is a fact that Marathi and Urdu books on Social Studies, General Mathematics and General Science prescribed for Standards VI, VIII, XI and X were not available at the Government District Book Depot up to 25th June 1970 ;